ಶ್ರೀ ಎಸ್. ಯೋಗೀಶ್ ಭಟ್ : ಸನ್ಮಾನ್ಯ ಅಧ್ಯಕ್ಷರೆ, ಇನ್ನೂ ಆಶ್ಚರ್ಯ ಎಂದರೆ, ಕಳೆದ ಹಲವು ವರ್ಷಗಳಿಂದ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಕೇವಲ 600 ರೂಪಾಯಿ ಸಂಬಳದಲ್ಲಿ ವಾರಣಾಸಿಯಂಥ ಕ್ಷೇತ್ರದಲ್ಲಿ ಕೆಲಸ ಮಾಡುವುದಕ್ಕೆ ಸಾಧ್ಯವಿದೆಯೇ? ತಮ್ಮನ್ನು ಖಾಯಂಗೊಳಿಸಿ ಮತ್ತು ಅದನ್ನು ರೆಗ್ಯೂಲರೈಸ್ ಮಾಡಿಕೊಳ್ಳಿ ಎಂದು ಅವರು ಸರ್ಕಾರಕ್ಕೆ ಪದೇ ಪದೇ ಮನವಿಯನ್ನು ಸಲ್ಲಿಸುತ್ತಿದ್ದಾರೆ. ಕೊನೆಯ ಪಕ್ಷ ಮಿನಿಮಮ್ ಸಂಬಳ ಕೊಡಿ ಎಂದು ಕೇಳಿದ್ದಕ್ಕೆ ಇಷ್ಟರವರೆಗೆ ಅವರ ಬೇಡಿಕೆಯನ್ನು ಈಡೇರಿಸಿಲ್ಲ, ಅದನ್ನು ಪರಿಗಣನೆಗೆ ತೆಗೆದುಕೊಂಡಿಲ್ಲ. ಮಾನ್ಯ ಮಂತ್ರಿಗಳು ಅದರ ಬಗ್ಗೆ ಕೂಡ ತಮ್ಮ ಉತ್ತರದಲ್ಲಿ ಹೇಳಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಆರ್.ಎಲ್. ಜಾಲಪ್ಪ : ಇಲ್ಲಿ ಯಾರು ಯಾರಿಗೆ ಎಷ್ಟೆಷ್ಟು ಸಂಬಳ ಬರುತ್ತದೆ ಎನ್ನುವುದಕ್ಕೆ ನನ್ನಲ್ಲಿ ವಿವರ ಇದೆ. ಅವರು ಹೇಳಿದ ಹಾಗೆ ಅಲ್ಲಿನ ಸಿಬ್ಬಂದಿಗೆ ಹಣ ಸಾಲುವುದಿಲ್ಲ. ಸ್ವಲ್ಪ ಜಾಸ್ತಿ ಮಾಡಬೇಕು. ಅದನ್ನು ಪರಿಶೀಲಿಸುತ್ತೇನೆ.

ಶಿಗ್ಗಾಂವ್ ಮತ್ತು ಸವಣೂರು ಬಸ್ ಡಿಪೋಗಳ ಕಾಮಗಾರಿ

267 - ಶ್ರೀ ಮಂಜುನಾಥ ಸಿ. ಕುನ್ನೂರ್ (ಶಿಗ್ಗಾಂವ್) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ್ ಬಸ್ ಸ್ಟ್ಯಾಂಡ್ ಹಾಗೂ ಸವಣೂರು ಬಸ್ ಡಿಪೋಗಳಿಗೆ ಎಷ್ಟು ಎಕರೆ ಜಮೀನನ್ನು ವಶಪಡಿಸಿಕೊಳ್ಳಲಾಗಿದೆ.

ಆ) ಸದರಿ ಶಿಗ್ಗಾಂವ್ ಬಸ್ ಸ್ಟ್ಯಾಂಡ್ ಹಾಗೂ ಸವಣೂರು ಡಿಪೋಗಳ ಕಾರ್ಯವನ್ನು ಬೇಗನೆ ಪ್ರಾರಂಭಿಸಲಾಗುವುದೇ? ಹಾಗಿದ್ದಲ್ಲಿ ಸರ್ಕಾರವು ತೆಗೆದುಕೊಂಡ ಕ್ರಮಗಳೇನು?

ಶ್ರೀ ಕೆ.ಎಸ್.ಬೀಳಗಿ (ಸಾರಿಗೆ ಮಂತ್ರಿಗಳು) :

ಅ) ಶಿಗ್ಗಾಂವ್‌ನಲ್ಲಿ ಬಸ್ ನಿಲ್ದಾಣ ನಿರ್ಮಿಸಲು ಸಾರಿಗೆ ಸಂಸ್ಥೆಯು 2 ಎಕರೆ 20 ಗುಂಟೆ ಭೂಮಿಯನ್ನು ವಶಕ್ಕೆ ತೆಗೆದುಕೊಂಡಿದೆ. ಸವಣೂರಿನಲ್ಲಿ ಬಸ್ ಘಟಕವನ್ನು, ನಿರ್ಮಿಸಲು 12.13. ಎಕರೆ ಭೂಮಿಯನ್ನು ಸ್ವಾಧೀನ ಪಡಿಸಿಕೊಳ್ಳಲಾಗಿದೆ.

ಆ) ಶಿಗ್ಗಾಂವ್ ಬಸ್ ನಿಲ್ದಾಣ ನಿರ್ಮಿಸುವ ಕಾರ್ಯವನ್ನು ಶೀಘ್ರವಾಗಿ ತೆಗೆದುಕೊಳ್ಳಲಾಗುವುದು. ಈಗಾಗಲೇ ಈ ಬಸ್ ನಿಲ್ದಾಣದ ಕೆಲಸದ ಬಗ್ಗೆ ಟೆಂಡರುಗಳು ಬಂದಿದ್ದು ಇವುಗಳು ಪರಿಶೀಲನೆಯ ಹಂತದಲ್ಲಿರುತ್ತದೆ. ಸವಣೂರು ಬಸ್ ಘಟಕದ ವಿಷಯದಲ್ಲಿ ಸ್ವಾಧೀನ ಪಡಿಸಿಕೊಂಡಿರುವ ಭೂಮಿಯ ಬೆಲೆ ಮತ್ತು ಈ ಭೂಮಿಯ ಹಕ್ಕುದಾರರ ಬಗ್ಗೆ ವಿವಾದವಿರುತ್ತದೆ. ವಿಷಯಗಳ ತೀರ್ಮಾನವಾದ ನಂತರ ತಕ್ಷಣವೇ ಬಸ್ ನಿಲ್ದಾಣವನ್ನು ಕಟ್ಟುವ ಕಾರ್ಯಕ್ರಮವನ್ನು ಕೈಗೆತ್ತಿಕೊಳ್ಳಲಾಗುವುದು.

ಶ್ರೀ ಮಂಜುನಾಥ ಸಿ. ಕುನ್ನೂರ್ : ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರದಲ್ಲಿ ಶಿಗ್ಗಾಂವ್‌ನಲ್ಲಿ ಬಸ್ ಸ್ಟ್ಯಾಂಡ್ ನಿರ್ಮಿಸಲು ಸಾರಿಗೆ ಸಂಸ್ಥೆಯಿಂದ 2 ಎಕರೆ 20 ಗುಂಟೆ ಜಾಗವನ್ನು ತೆಗೆದುಕೊಳ್ಳಲಾಗಿದೆ. ಮತ್ತು ಸವಣೂರಿನಲ್ಲಿ ಬಸ್ ಘಟಕ ನಿರ್ಮಾಣ ಮಾಡಲು 13 ಎಕರೆ ಭೂಸ್ವಾಧೀನ ಪಡಿಸಿಕೊಳ್ಳಲಾಗಿದೆ ಎಂದು ತಿಳಿಸಿದ್ದಾರೆ. ಬಸ್ ನಿಲ್ದಾಣದ ಕಾರ್ಯ ಬಹಳ ದಿವಸಗಳಿಂದ ವಿಳಂಬವಾಗುತ್ತಾ ಬಂದಿದೆ. ಇದಕ್ಕೆ ಬೇಕಾದಂಥ ಜಮೀನನ್ನು ಕೂಡ ಕೊಡಿಸಿದ್ದೇವೆ. ಜೊತೆಗೆ ಹಣಕಾಸಿನ ತೊಂದರೆ ಕೆಎಸ್‌ಆರ್‌ಟಿಸಿಗೆ ಆಗುತ್ತದೆ ಎನ್ನುವುದಕ್ಕೋಸ್ಕರ ನಾವು ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ 5 ಲಕ್ಷ ರೂಪಾಯಿ ಹಣವನ್ನು ಮತ್ತು ಲೋಕಸಭಾ ಸದಸ್ಯರ ಅನುದಾನದಲ್ಲಿ 5 ಲಕ್ಷ ರೂಪಾಯಿ ಹಣವನ್ನು ತಮಗೆ ಈಗಾಗಲೇ ಕೊಡಲಾಗಿದೆ. ಕಾರಣ ಅದಷ್ಟು ಬೇಗನೆ ತಾವು ಇದನ್ನು ಮಾಡುತ್ತಿದ್ದೀರಿ ಎಂದು,

ಆದರೆ ತಾವು ಪರಿಶೀಲನೆ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ. ಆದಷ್ಟು ಬೇಗನೆ ಇದನ್ನು ಪರಿಗಣಿಸಿ ಕೂಡಲೇ ಈ ಕೆಲಸ ಮಾಡಬೇಕೆಂದು ತಮ್ಮನ್ನು ಕೇಳುತ್ತಿದ್ದೇನೆ. ಜೊತೆಗೆ ಸವಣೂರು ಬಸ್ ಘಟಕ, ಆದರ ಬಗ್ಗೆಯೂ 12 ಎಕರೆ 13 ಗುಂಟೆ ಜಮೀನನ್ನು ತಾವು ಭೂಸ್ವಾಧೀನ ಪಡಿಸಿಕೊಂಡಿದ್ದೀರಿ, ಭೂಸ್ವಾಧೀನ ಪಡಿಸಿಕೊಂಡು ಕಬ್ಜಾವನ್ನು ತೆಗೆದುಕೊಂಡಿದ್ದೇವೆಂದು ಹೇಳಿದ್ದೀರಿ. ಆದರೆ ಭೂಮಿಯ ಬೆಲೆ ಮತ್ತು ಭೂಮಿಯ ಹಕ್ಕುದಾರರ ಬಗ್ಗೆ ಒಂದು ವಿವಾದ ಇದೆಯೆಂದು ಹೇಳಿದಿರಿ. ವಿವಾದದ ಪ್ರಶ್ನೆ ಬೇರೆ. ಈಗಾಗಲೇ ತಾವು ಜಮೀನನ್ನು ತೆಗೆದುಕೊಂಡಿದ್ದೀರಿ. ಯಾರೋ ಒಬ್ಬ ಅಪರಚಿತ who is in no way concerned with that property has filed a suit in the court of law. ಈ ಘಟಕವನ್ನು ತಾವು ನಿರ್ಮಾಣ ಮಾಡಬೇಕು. ಏಕೆಂದರೆ ತಾವು ವಿವಾದ ಇದೆಯೆಂದು ಬಿಡುವುದರಿಂದ ಇದು ಬಹಳಷ್ಟು ತಡವಾಗುತ್ತದೆ ಜೊತೆಗೆ ಅದು ಕೋಟ್ಯಾಂತರ ರೂಪಾಯಿಯ ಆಸ್ತಿ ಅವನು ಪರಿಹಾರ ಹಣ ಕೇಳಬಹುದು. ನಾವು ಕೊಡುತ್ತೇವೆ ಬೇಕಾದರೆ. ಆದ್ದರಿಂದ ತಾವು ಕೂಡಲೆ ಈ ಘಟಕವನ್ನು ಪ್ರಾರಂಭ ಮಾಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು : ನಿಮ್ಮ ಅದೃಷ್ಟ ಚೆನ್ನಾಗಿ ಇದೆ. ಮೊದಲು ಏನಾದರೂ ಈ ಪ್ರಶ್ನೆ ಬಂದಿದ್ದರೆ ವಿಶ್ವೇಶ್ವರ ಹೆಗಡೆಯವರ ಪ್ರಶ್ನೆ ಆ ಮೇಲೆ ಬಂದಿದ್ದರೆ ನಿಮಗೆ ಪಜೀತಿ ಆಗುತ್ತಿತ್ತು.

ಶ್ರೀ ಕೆ.ಎಸ್. ಬೀಳಗಿ : ಮಾನ್ಯ ಸಭಾಧ್ಯಕ್ಷರೆ, ಈ ಶಿಗ್ಗಾಂವ್‌ನಲ್ಲಿ ಬಸ್ ಸ್ಟ್ಯಾಂಡ್ ಕಟ್ಟುವುದು ಏನೂ ತಡವಾಗುವುದಿಲ್ಲ, ಏಕೆಂದರೆ ಟಿಂಡರ್ ಕರೆದಿದ್ದೇವೆ. ಕಳೆದ ತಿಂಗಳು 29ನೇ ತಾರೀಖು ಕೊನೆಯ ದಿನಾಂಕವಾಗಿತ್ತು. ಈಗ ಟಿಂಡರ್ ಬಂದಿದೆ. ಅದು ಪರಿಶೀಲನೆಯಾಗಿ ಆದಷ್ಟು ಬೇಗನೆ ಬಸ್ ಸ್ಟ್ಯಾಂಡ್ ಕಟ್ಟಿಸವುದಕ್ಕೆ ಪ್ರಾರಂಭ ಮಾಡುತ್ತೇವೆ. ಆದರಲ್ಲಿ ಏನೂ ಸಮಸ್ಯೆಯಿಲ್ಲ, ಸವಣೂರುನಲ್ಲಿ ಬಸ್ ಘಟಕ ಸ್ಥಾಪಿಸಲು 5-6 ಲಕ್ಷ ರೂಪಾಯಿ ಹಣವನ್ನು ಒದಗಿಸಿದ್ದಾರೆ, ಬಹಳ ಸಂತೋಷ. ಇದು ತಮಗೂ ಗೊತ್ತಿದೆ. ಇನ್ನು ಸ್ವಲ್ಪ ಹಣ ಡಿಪೋ ಮಾಡುವುದಕ್ಕೆ ಕೊಡುತ್ತೇವೆಂದು ಹೇಳಿದ್ದಾರೆ. ಅದು ಏನಾಗಿದೆಯೆಂದರೆ. ಅದು it is property under court order ಡಿ.ಸಿ. ಯವರು ಲ್ಯಾಂಡ್ ಕೊಟ್ಟಿದ್ದಾರೆ. ನಮ್ಮ ಸ್ವಾಧೀನದಲ್ಲಿ ಇದೆ. ಕೆಲವರು claim accept ಮಾಡಿ ಕೋರ್ಟಿಗೆ ಹೋಗಿದ್ದಾರೆ. ಕೆಳಗಿನ ಕೋರ್ಟಿನಲ್ಲಿ ಅವರ ಕಡೆಗೆ ಆಗಿದೆ. ಈಗ ಆದರ ಮೇಲೆ ಡಿ.ಸಿ. ಯವರು ಅಪೀಲ್ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದಾರೆ. ಇದು ಒಂದು ನೋಟ. ಅದನ್ನು ಕಟ್ಟಬಾರದು ಎಂದು ನಮಗೆ ಸ್ಟೇ ಏನೂ ಇಲ್ಲ. ಆದರೆ ಒಂದು ಸಲ ಶುರು ಮಾಡಿದ ಮೇಲೆ ಕೋರ್ಟ್‌ನಿಂದ ಸ್ಟೇ ಬಂದರೆ ಮತ್ತೆ ಅದೆಲ್ಲಾ ವೇಸ್ಟ್ ಆಗುತ್ತದೆ. ಎನ್ನುವುದನ್ನು ದೃಷ್ಟಿಯಲ್ಲಿಟ್ಟುಕೊಂಡರು. ನಾವು ಪ್ರಯತ್ನ ಮಾಡುತ್ತಿದ್ದೇವೆಂದು. ಅವರಿಗೂ ಗೊತ್ತಿದೆ. ಅಲ್ಲಿ 7-8 ಶೆಡ್ಡುಗಳು ಇವೆ, ಆ ಶೆಡ್ಡುಗಳಲ್ಲೇ ಡಿಪೋವನ್ನು ಪ್ರಾರಂಭ ಮಾಡುವುದಕ್ಕೆ ಸಾಧ್ಯವಿದ್ದರೆ ಪ್ರಾರಂಭಮಾಡಬೇಕು ಎನ್ನುವಂಥ ವಿಚಾರವನ್ನು ಮಾಡುತ್ತಾ ಇದ್ದೇವೆ. ಆದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಮಂಜನಾಥ ಸಿ. ಕುನ್ನೂರ್ : ಆದಷ್ಟು ಬೇಗನೆ ತಾವು ತ್ಯರ್ತಿಕವಾಗಿಯಾದರೂ ಅದನ್ನು ಪ್ರಾರಂಭ ಮಾಡಿ.

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಸಿಬ್ಬಂದಿಗೆ ಪ್ರೋತ್ಸಾಹ ಧನ

460 - ಶ್ರೀ ಎಸ್.ಎ. ರವೀಂದ್ರನಾಥ್ (ಮಾಯಕುಂಡ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?